**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು-ಮಡಿಕೇರಿ**

**ಎಸ್.ಸಿ ಸಂಖ್ಯೆಃ 60/2024**

ಪ್ರಾಸಾಃ 5
ಚಾಸಾಃ**5**

ಸಾಕ್ಷಿದಾರರ ಹೆಸರು: ಚೋಮ

ತಂದೆಯ ಹೆಸರು : ಕಾಳ

ವಯಸ್ಸು : 65 ವರ್ಷ

ವೃತ್ತಿ : ಕೂಲಿ ಕೆಲಸ

ವಾಸ : ಕೂಡ್ಲೂರು ಚೆಟ್ಟಳ್ಳಿ ಗ್ರಾಮ.

**ಸಾಕ್ಷಿಯನ್ನು ದಿನಾಂಕ 22-04-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ಪ್ರಾಸಾ-3 ನನ್ನ ಮೊಮ್ಮಗಳು. ಪ್ರಾಸಾ-4 ನನ್ನ ಮಗಳು. ಚಾಸಾ-6 ನನ್ನ ಮೊಮ್ಮಗ. ಪ್ರಾಸಾ-4 ರವರನ್ನು ಮೊದಲು ಸೂರ್ಯ ಎನ್ನುವವರ ಜೊತೆ ಮದುವೆ ಮಾಡಿ ಕೊಡಲಾಗಿತ್ತು. ಆ ಬಳಿಕ ಸೂರ್ಯ ತೀರಿ ಹೋದರು. ನಂತರ ಪ್ರಾಸಾ-3 ಹಾಗೂ ಪ್ರಾಸಾ-4 ನಮ್ಮ ಮನೆಯಲ್ಲೆ ನಮ್ಮ ಜೊತೆ ವಾಸವಾಗಿಕೊಂಡಿದ್ದರು. ಮಲ್ಲಿಗೆ ನನ್ನ ತಂಗಿ. ಮಲ್ಲಿಗೆ ನಾವು ಇರುವ ಜಾಗದಲ್ಲಿ ಹೊಸ ಮನೆಯನ್ನು 1 ನೇ ಆರೋಪಿಯ ಮುಖಾಂತರ ಕಟ್ಟಿಸಿಕೊಟ್ಟಿದ್ದಳು. ಮನೆ ಕಟ್ಟುವ ಸಂದರ್ಭದಲ್ಲಿ ಪ್ರಾಸಾ-3 ರವರಿಗೆ 1 ನೇ ಆರೋಪಿಯ ಜೊತೆ ಸಂಬಂಧವಾಗಿ ಮದುವೆ ಆಗಿದೆ ಎಂದು ನನಗೆ ಆ ಬಳಿಕ ತಿಳಿದು ಬಂತು. ಪ್ರಾಸಾ-3 ಸದರಿ ಮದುವೆಯಿಂದ ಗರ್ಭಿಣಿ ಆಗಿದ್ದಾಳೋ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ಪೊಲೀಸರ ಮುಂದೆ ನೀಡಿದ ಹೇಳಿಕೆ ಮತ್ತು ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಗಿದೆ).**

**ಪಾಟೀಸವಾಲು- ಸರ್ಕಾರಿ ಅಭಿಯೋಜಕರಿಂದಃ**

2. ಪ್ರಾಸಾ-3 ಮನೆಯಲ್ಲಿ ಒಬ್ಬಳೆ ಇದ್ದಾಗ 1 ನೇ ಆರೋಪಿ ಅಲ್ಲಿಗೆ ಬರುತಿದ್ದು ಅವರ ಇಬ್ಬರ ಮಧ್ಯೆ ಪ್ರೀತಿ ಆಗಿ 1 ನೇ ಆರೋಪಿ ಆಕೆಗೆ ಮದುವೆ ಆಗುತ್ತೇನೆ ಎಂದು ಮಾತು ಕೊಟ್ಟು ಆಕೆಯ ಜೊತೆ ದೈಹಿಕ ಸಂಪರ್ಕ ಮಾಡಿ ಆಕೆ ಗರ್ಭಿಣಿ ಆದ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ.

3. ದಿನಾಂಕ 06-03-2024 ರಂದು ಪ್ರಾಸಾ-3 ರವರಿಗೆ ಹೊಟ್ಟೆನೋವು ಆಗಿ ಆಕೆ ಒಂದು ಜೀವಂತ ಗಂಡು ಮಗುವಿಗೆ ಜನ್ಮ ನೀಡಿದ್ದು, ಈ ವಿಚಾರವನ್ನು ನನ್ನ ಮಗಳು 1 ನೇ ಆರೋಪಿಗೆ ಫೋನ್ ಮಾಡಿ ತಿಳಿಸಿದ್ದು, 1 ನೇ ಆರೋಪಿ ಅಲ್ಲಿಗೆ ಬಂದು ಜೀವಂತ ಗಂಡು ಮಗುವನ್ನು ಸಾಕುತ್ತೇನೆ ಎಂದು ಹೇಳಿ ಮಗುವನ್ನು ತೆಗೆದುಕೊಂಡು ಹೋಗಿ ಮಧ್ಯ ದಾರಿಯಲ್ಲಿ ಮಗುವನ್ನು ಉಸಿರುಗಟ್ಟಿಸಿಕೊಂಡು ಆ ಬಳಿಕ 2 ನೇ ಆರೋಪಿಯ ಸಹಾಯದಿಂದ ಮನೆಯ ಹತ್ತಿರ ಇರುವ ಗದ್ದೆಯಲ್ಲಿ ಹೂತು ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ 1 ನೇ ಆರೋಪಿ ನನ್ನ ಮೊಮ್ಮಗಳ ಗಂಡನಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ಈ ಸಾಕ್ಷಿಗೆ ಒಂದು ಹೇಳಿಕೆ ಓದಿ ಹೇಳಿ "ಕುಮಾರ್ ಅವರ ಮನೆ ಕೆಲಸ ----------------------------------------------ನೀಡಿದ ಹೇಳಿಕೆ "ಎಂಬಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಪಿ-12 ಎಂದು ಗುರುಸಲಾಯಿತು.

**<u>ಪಾಟೀಸವಾಲು- 1 ಮತ್ತು 2 ನೇ ಆರೋಪಿ ಪರವಾಗಿ ಶ್ರೀ. ಬಿ.ಡಿ.ಕೆ..,ವಕೀಲರಿಂದಃ</u>**

ಇರುವುದಿಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ